

ಬಂದನಾ ಕುಮಾರಿ ಕೃತಿ

(6ನೇ ಪುಟದಿಂದ)

ಯಾಂತ್ರಿಕ ಬದುಕನ್ನು ನೋಡುವ ಮತ್ತು ಅದಕ್ಕೆ ಸ್ಪಂದಿಸುವ ಒಂದು ಭಿನ್ನ ಕ್ರಮವಿದು. ಲೇವಡಿ ಎಂದುಕೊಂಡರೆ ಅದಕ್ಕೂ ಇಲ್ಲಿ ಸ್ಪೇಸ್ ಇದೆ. ಉತ್ತಮ ಹೋಲಿಕೆ, ವೈಜ್ಞಾನಿಕ ತಿಳುವಳಿಕೆ ಎನ್ನುವರ್ಥದಲ್ಲಿ ಭಾವಿಸುವುದಕ್ಕೂ ಸಾಧ್ಯವಿದೆ.

ಅವಿನಾಶ್ ತಮ್ಮ ಕಲಾಕೃತಿಯನ್ನು ಬಹುಮಾಧ್ಯಮ ಬಳಸಿ ರೂಪಿಸುತ್ತಾರೆ. ವಾಟರ್‌ಕಲರ್ ಅಥವಾ ಅಕ್ರೆಲಿಕ್ ಪೇಂಟ್ ಬಳಸಿ ಉಪಕರಣದ ಬಿಡಿಭಾಗಗಳ ವಿವರ, ಅವುಗಳ ಒಳರಚನೆ ಮತ್ತು ಕಾರ್ಯವನ್ನು ಸರ್ಕ್ಯೂಟ್ ಅಥವಾ ಬ್ಲೂಪ್ರಿಂಟ್‌ನಂತೆ ಹಿನ್ನೆಲೆಯನ್ನು ರೂಪಿಸಿಕೊಳ್ಳುತ್ತಾರೆ. ತನಗೆ ಹೇಳಬೇಕಾದ ಪ್ರಮುಖ ವಸ್ತುವನ್ನು ಕಟ್‌ಔಟ್ ಮೂಲಕ ಮುನ್ನೆಲೆಗೆ ತರುತ್ತಾರೆ. ಅದಕ್ಕೆ ವಿವಿಧ ಯಂತ್ರಗಳ ಉಪಕರಣದ ಬಿಡಿ ಭಾಗಗಳನ್ನು ಪೂರಕವಾಗಿ ಜೋಡಿಸಿಕೊಂಡು ಒಂದು ಕಥನವನ್ನು ರೂಪಿಸಿಕೊಳ್ಳುತ್ತಾರೆ. ಬರೋಡಾದ ಹೆಸರಾಂತ ಕಲಾಶಾಲೆಯಲ್ಲಿ 'ಬ್ಯಾಚುಲರ್ ಆಫ್ ವಿಶ್ಯುಯಲ್ ಆರ್ಟ್' ಓದಿರುವ ಅವಿನಾಶ್, ಈಗ ಹಿಡಿದಿರುವ ಕಲಾ ಹಾದಿ ಅತ್ಯಂತ ಭಿನ್ನ.

ಆಧುನಿಕ ಯುಗದ ಮನುಷ್ಯನ ಯಾಂತ್ರಿಕತೆಯನ್ನು ಸಣ್ಣದಾಗಿ ಕೆಣಕುತ್ತ ಅದನ್ನು ವಿಡಂಬನೆಯ ಅರ್ಥದಲ್ಲಷ್ಟೇ ಕಾಣದೆ ದೇಹದೊಳಗಿನ ತಂತ್ರಜ್ಞಾನದ ನೆಲೆಯನ್ನು ಶೋಧಿಸಿ ಕಲಾತ್ಮಕವಾಗಿ ವಿವರಿಸಲು ಅಥವಾ ಪ್ರತಿಪಾದಿಸಲು ಯತ್ನಿಸುತ್ತಾರೆ. ಯಂತ್ರಗಳ ಭಾಷೆಯನ್ನು ಕಲೆಯಲ್ಲರಳಿಸಲು ಹಂಬಲಿಸುತ್ತಾರೆ ಅವಿನಾಶ್.

## ಬಂದನಾ ಕುಮಾರಿ

ಹೆಣ್ಣು ಮತ್ತು ಪುರಾಣಗಳ ನೆಲೆಯಿಂದ ವಸ್ತುವನ್ನು ಹೆಕ್ಕುವ ಬಂದನಾ ಕುಮಾರಿ, ಮಧುಬನಿ ಶೈಲಿಯಲ್ಲಿ ಕಲಾಕೃತಿಗಳನ್ನು ಕಟ್ಟಿಕೊಡುತ್ತಾರೆ. ಹೆಚ್ಚು ವಿವರಣಾತ್ಮಕವಾಗಿ ಕೃತಿ ಬಿಡಿಸುವ ಬಂದನಾ, ಕಲೆಯಲ್ಲಿ ಸ್ತ್ರೀ ಸಂವೇದನೆಗಳನ್ನು ತುಂಬಲು ನೋಡುತ್ತಾರೆ. ದೇವಾನುದೇವತೆಗಳ ಬಗ್ಗೆ ಅತೀವ ಆಸಕ್ತಿ ಹೊಂದಿದವರಂತೆನಿಸುವ ಈ ಕಲಾವಿದೆ, ಮಹಾಭಾರತ ಕಾವ್ಯದ ಕೃಷ್ಣನನ್ನು ಆಧುನಿಕ ಯುಗಕ್ಕೆ ಹೇಗೆ ತರಬಹುದು ಎನ್ನುವ ಕಲ್ಪನೆಯನ್ನು ಕಟ್ಟಿಕೊಡುತ್ತಾರೆ. ಕೃಷ್ಣನನ್ನು ಆಧುನಿಕ ಪುರುಷನನ್ನಾಗಿಸಿ ಗೋಪಿಕೆಯರನ್ನು ವಿವಿಧ ಹೆಣ್ಣು ಪ್ರಾಣಿಗಳ ಹೋಲಿಕೆಯಲ್ಲಿ ಚಿತ್ರಿಸುತ್ತಾರೆ. ನವಿಲು, ಜಿಂಕೆ, ಗಿಳಿ, ಗೊರವಂಕ ಮತ್ತಿತರ ಪ್ರಾಣಿ, ಪಕ್ಷಿಗಳ ಸೌಂದರ್ಯವನ್ನು ಹೆಣ್ಣಿನಲ್ಲಿ ಕಾಣಲೆತ್ನಿಸುತ್ತಾರೆ.

## ಸುಚಿತ್ ಸಾಹನಿ

ಪೋಸ್ಟರೈಸ್ ಎನ್ನುವ ಒಂದು ಆಯ್ಕೆ ಫೋಟೊಶಾಪ್ ಸಾಫ್ಟ್‌ವೇರ್‌ನಲ್ಲಿದೆ. ಯಾವುದೇ ಜೆಪಿಇಜಿ ಫಾರ್ಮ್ಯಾಟ್‌ನ ಚಿತ್ರವನ್ನು ಆಯ್ದು ಅದನ್ನು ಪೋಸ್ಟರೈಸ್‌ಗೊಳಪಡಿಸಿದರೆ ಮೂಡುವ ಕಲಾಕೃತಿ ಭಿನ್ನ ಕಲರ್ ಪ್ಯಾಚ್/ಶೇಡ್‌ನಲ್ಲಿ ದಕ್ಕುತ್ತದೆ. ಹಾಗೊಂದು ಪರಿಣಾಮ ನೀಡುವ ಇಮೇಜ್ ಅನ್ನು ಕ್ಯಾನ್ವಾಸ್‌ನಲ್ಲಿ ಚಿತ್ರಿಸುವ ಸುಚಿತ್ ಸಾಹನಿ ಯಾವುದೇ ಭಾವಚಿತ್ರಿಕೆಯನ್ನು ವಿಶಿಷ್ಟ ಶೈಲಿಯಲ್ಲಿ ಕಟ್ಟಿಕೊಡುತ್ತಾರೆ. ತನ್ನ ಸುತ್ತ ಮುತ್ತ ನಡೆಯುವ ಸಾಧಾರಣ ಸನ್ನಿವೇಶಗಳು ಅಥವಾ ದಕ್ಕುವ ವಸ್ತುಗಳ ಜೊತೆ ಮನುಷ್ಯ ಸಂಬಂಧಗಳನ್ನು ತನ್ನದೇ ನೆಲೆಯಲ್ಲಿ ಗ್ರಹಿಸುವ ಇವರು ಭಿನ್ನ ಕಲಾವಿದ.

ಕ್ರಿಶಾಲಾ ಆರ್ಟ್ಸ್ ವೇದಿಕೆಯ ಶಿಲ್ಪಾ ದುಗಾರ್, ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೊಟೇಲ್‌ನ ಆರ್ಟ್ ಕಾರಿಡಾರ್‌ನಲ್ಲಿ ಈಚೆಗೆ ಏರ್ಪಡಿಸಿದ್ದ 'ರಿಡಲ್ ಆಫ್ ಕಲರ್ಸ್' ಪ್ರದರ್ಶನದಲ್ಲಿ ಈ ಉದಯೋನ್ಮುಖ ಕಲಾವಿದರು ಗಮನ ಸೆಳೆದರು. ದೇಶದ ಹಲವು ಕಲಾವಿದರನ್ನು ಬೆಂಗಳೂರಿನ ಕಲಾ ರಸಿಕರಿಗೆ ಪರಿಚಯಿಸುವ ಮತ್ತು ವಿದೇಶಗಳಲ್ಲಿ ದೇಶೀಯ ಕಲಾವಿದರನ್ನು ವಿಶ್ವಕ್ಕೆ ಪರಿಚಯಿಸುವ ಅನನ್ಯ ಕಲಾಸೇವೆ ಶಿಲ್ಪಾ ಅವರದು.